ಬೇಕು. ದಯವಿಟ್ಟು ಒಂದಿಷ್ಟು ಹೊತ್ತು ನಿನ್ನ ಮೊಲೆಹಾಲು ಕುಡಿಯಲು ನನಗೆ ಅನುವು ಮಾಡಿಕೊಡು, ನಿನ್ನನ್ನು ಕೈಯೊಡ್ಡಿ ಬೇಡುವೆ. ನಿನ್ನ ಹಾಲು ಕುಡಿದು ಒಂದಿಷ್ಟು ತ್ರಾಣ ಬಂದ ಮೇಲೆ ನನ್ನ ಪ್ರಶ್ನೆಗಳನ್ನು ಕೇಳುವೆ."

ಪುಣ್ಯಕೋಟಿಗೆ ಇನ್ನೂ ಅಚ್ಚರಿ! ಇಂಥ ಸ್ಥಿತಿಯೊಂದನ್ನು ಊಹಿಸಿಯೂ ಇರದ ಅದಕ್ಕೆ ಏನು ಹೇಳಬೇಕೆಂಬುದೇ ತಿಳಿಯುತ್ತಲಿಲ್ಲ. ದೈನ್ಯದಿಂದ ಮೊಲೆಹಾಲನ್ನು ಕೇಳುತ್ತಲೇ ತನ್ನ ಹತ್ತಿರ ಬರತೊಡಗಿದ ಹುಲಿಮರಿಯನ್ನು ಗಮನಿಸಿ ಅದು ಹೆದರಿತಷ್ಟೇ ಅಲ್ಲ, ಕಟ್ಟಿದ ಹಗ್ಗವನ್ನು ಜಗ್ಗಾಡತೊಡಗಿತು. ಭಯ ಪಟ್ಟ ಅದರ ಕರು ಕೂಡಾ ಅತ್ತಿತ್ತ ಜಿಗಿದಾಡತೊಡಗಿತು. ಕೊಟ್ಟಿಗೆಯಲ್ಲಿ ಅನಿರೀಕ್ಷಿತ ಕೋಲಾಹಲವೇ ನಿರ್ಮಾಣವಾಗಿ, ಆಕಳುಗಳೆಲ್ಲವೂ ಹಗ್ಗ ಹರಿಯುವಂತೆ ಕೊಸರಾಡತೊಡಗಿದವು. ತಟ್ಟಿಯ ಮರೆಯಲ್ಲಿಯೇ ನಿಂತು, ಬಂದೂಕಿನ ನಳಿಕೆ ತುರುಕಿದ್ದ ತೂತಿನಲ್ಲೇ ಒಕ್ಕಣ್ಣು ಹಾಯಿಸಿ ಆ ಗದ್ದಲದ ದೃಶ್ಯವನ್ನೆಲ್ಲ ನೋಡುತ್ತಿದ್ದ ಕಾಳಿಂಗಜ್ಜ, 'ಅಯ್ಯೋ ಇದೇನಿದು! ಮತ್ತೇನಾಗುವುದೋ... ಯಾವುದಕ್ಕೂ ಸಜ್ಜಾಗಿರಬೇಕು' ಎಂದುಕೊಂಡು ಬಂದೂಕಿನ ಕುದುರೆ ಬಟನ್ನಿನ ಮೇಲೆ ತೋರುಬೆರಳನ್ನು ಅಣಿಗೊಳಿಸಿದ.

ಕ್ಷಣ ಹೊತ್ತು ಮೊಲೆಹಾಲು ಕುಡಿಯಲು ಅವಕಾಶ ಕೇಳಿದ ತನ್ನ ಸಣ್ಣ ಬೇಡಿಕೆಗೂ ಅಷ್ಟೊಂದು ಗದ್ದಲವೇ ನಡೆದುದನ್ನು ನೋಡಿದ ಹುಲಿಮರಿಗೆ, ತನ್ನ ಆಸೆ ಪೂರೈಸುವುದಿಲ್ಲವೆಂದು ಅರಿವಾದೊಡನೆಯೆ, ತಾನೇ ಹಿಂದೆ ಸರಿಯುತ್ತ ಮತ್ತೆ ಮೊದಲಿದ್ದ ಜಾಗೆಗೆ ಬಂದು ನಿಂತಿತು. ಹಸಿವಿನಿಂದ

